# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 74 (720) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಶಿವಕುಮಾರ್ ಕೆ. (ನಾಮನಿರ್ದೇಶಿತರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 21.08.2026 |
| ಉತ್ತರಿಸುವ ಸಚಿವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಡಾಬಸ್‌ಪೇಟೆ ಸಮೀಪ ಕೈಗೆತ್ತಿಕೊಂಡಿರುವ ಕ್ವಿನ್ ಸಿಟಿ (KWIN) ಯೋಜನೆಯ ಕಲ್ಪನೆ ಏನು; ಎಷ್ಟು ವಿಸ್ತೀರ್ಣದಲ್ಲಿ ಕಟ್ಟಲಾಗಿದೆ; | ಕ್ವಿನ್ ಸಿಟಿಯನ್ನು ಅಭಿವೃದ್ಧಿಪಡಿಸುವ ಸಂಬಂಧ ಸುಮಾರು ಒಟ್ಟು **4,873-29.04** ಎಕರೆ ಪ್ರದೇಶಕ್ಕೆ 28(1) ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದ್ದು, ಒಟ್ಟು **3490-15.04** ಎಕರೆ ಪ್ರದೇಶಕ್ಕೆ 28(4) ಅಂತಿಮ ಅಧಿಸೂಚನೆಗಳನ್ನು ಹೊರಡಿಸಲಾಗಿರುತ್ತದೆ.<br><br>ಮಂಡಳಿ ವತಿಯಿಂದ ಕೈಗೊಳ್ಳಲಾಗಿರುವ ಕ್ವಿನ್ ಸಿಟಿ **(KWIN City)**–ಜ್ಞಾನ, ಕ್ಷೇಮ ಮತ್ತು ನಾವೀನ್ಯತಾ ನಗರ) **(Knowledge, Wellbeing and Innovation City):** ಯೋಜನೆಯು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದ್ದು, ಶಿಕ್ಷಣ, ಸಂಶೋಧನೆ, ಆರೋಗ್ಯ ಸೇವೆ, ನಾವೀನ್ಯತೆ, ಕೈಗಾರಿಕೆ ಮತ್ತು ಸುಸ್ಥಿರ ಜೀವನವನ್ನು ಒಂದೇ ಸಮಗ್ರ ಯೋಜಿತ ಅಭಿವೃದ್ಧಿ ಹಾಗೂ ಮುಂದಿನ ಪೀಳಿಗೆಯ ನಗರ ಪರಿಸರ ವ್ಯವಸ್ಥೆಯನ್ನು ನಿರ್ಮಿಸುವ ಉದ್ದೇಶ ಹೊಂದಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ಮತ್ತು ಡಾಬಸ್‌ಪೇಟೆ ನಡುವಿನ ಪ್ರದೇಶದಲ್ಲಿ ಕಾರ್ಯಗತಗೊಳ್ಳಲಿರುವ ಈ ಯೋಜನೆಯು ಸುಮಾರು 5,000 ಎಕರೆ ಪ್ರದೇಶವನ್ನು ಒಳಗೊಳ್ಳಲಿದ್ದು, ಪ್ರತಿಭೆ, ತಂತ್ರಜ್ಞಾನ, ಉದ್ಯಮಶೀಲತೆ ಮತ್ತು ಗುಣಮಟ್ಟದ ಜೀವನಕ್ಕೆ ಜಾಗತಿಕ ತಾಣವಾಗಿ ಬೆಳೆಯುವ ಗುರಿ ಹೊಂದಿದೆ.<br><br>**KWIN City** ಯ ಪರಿಕಲ್ಪನೆಯು ಭವಿಷ್ಯದ ಆರ್ಥಿಕ ಬೆಳವಣಿಗೆಯನ್ನು ಕೇವಲ ಕೈಗಾರಿಕಾ ವಿಸ್ತರಣೆಯಿಂದ ಮಾತ್ರವಲ್ಲದೆ ಜ್ಞಾನ ಸೃಷ್ಟಿ, ತಾಂತ್ರಿಕ ನಾವೀನ್ಯತೆ, ಸಂಶೋಧನಾ ಶ್ರೇಷ್ಠತೆ ಮತ್ತು ಮಾನವ ಕ್ಷೇಮ ಇವುಗಳ ಸಮನ್ವಯದಿಂದ ಸಾಧಿಸಬಹುದು ಎಂಬ ದೃಷ್ಟಿಕೋನದಿಂದ ರೂಪುಗೊಂಡಿದೆ. ಕರ್ನಾಟಕವು ಈಗಾಗಲೇ ಭಾರತದ ತಂತ್ರಜ್ಞಾನ ಮತ್ತು ಸ್ಟಾರ್ಟ್‌ಅಪ್‌ಗಳ ಪ್ರಮುಖ ಕೇಂದ್ರವಾಗಿ ತನ್ನ ಸ್ಥಾನವನ್ನು ಸಾಬೀತುಪಡಿಸಿದೆ. ಈ ಶಕ್ತಿಯನ್ನು ಮತ್ತಷ್ಟು ವಿಸ್ತರಿಸುವ ಮೂಲಕ ವಿಶ್ವವಿದ್ಯಾಲಯಗಳು, ಸಂಶೋಧನಾ |

| | | |
|---|---|---|
| | | ಸಂಸ್ಥೆಗಳು, ಆರೋಗ್ಯ ಸೇವಾ ಕೇಂದ್ರಗಳು, ಸ್ಟಾರ್ಟ್‌ಅಪ್‌ಗಳು, ಕೈಗಾರಿಕೆಗಳು ಮತ್ತು ವಸತಿ ಸಮುದಾಯಗಳು ಪರಸ್ಪರ ಸಹಕಾರದಿಂದ ಕಾರ್ಯನಿರ್ವಹಿಸುವ ಸಮಗ್ರ ಪರಿಸರವನ್ನು **KWIN City** ಯಲ್ಲಿ ನಿರ್ಮಿಸಲು ಉದ್ದೇಶಿಸಿದೆ. |
| ಆ) | ಕ್ವಿನ್ ಸಿಟಿ ಯಲ್ಲಿ ಯಾವ್ಯಾವ ಕಂಪನಿಗಳು, ಜಾಗತಿಕ ಮಟ್ಟದ ವಿಶ್ವವಿದ್ಯಾಲಯಗಳು, ಸಂಶೋಧನಾ ಸಂಸ್ಥೆಗಳು, ಆಸ್ಪತ್ರೆಗಳು ಇತ್ಯಾದಿಗಳು ಬರುತ್ತಿವೆ; ಈ ನಿಟ್ಟಿನಲ್ಲಿ ಆಗಿರುವ ಒಡಂಬಡಿಕೆಗಳು ಎಷ್ಟು; | ಕ್ವಿನ್ ಸಿಟಿಯಲ್ಲಿ ಕೆಳಕಂಡ ಜಾಗತಿಕ ಮಟ್ಟದ ವಿಶ್ವವಿದ್ಯಾಲಯಗಳು, ಸಂಶೋಧನಾ ಸಂಸ್ಥೆಗಳು, ಆಸ್ಪತ್ರೆಗಳೊಡನೆ 14 ಒಡಂಬಡಿಕೆಯನ್ನು ಸಹಿ ಮಾಡಿದ್ದು, ಸದರಿ ವಿವರಗಳು ಈ ಕೆಳಕಂಡಂತಿರುತ್ತವೆ:<br>1) Toyota Kirloskar Motor Pvt. Ltd.<br>2) St. John's University<br>3) Dayanand Sagar University<br>4) Dr. CKM Shine School of Ethics and Technology Law<br>5) KK Educational and Charitable Trust<br>6) KLE University<br>7) PES University<br>8) Pragati University<br>9) NVT Quality Education Trust<br>10) RV College<br>11) ISBR<br>12) Mehras<br>13) Sharda University<br>14) SKRIBE |
| ಇ) | ಮೊದಲನೇ ಹಂತಹ ಪ್ರಗತಿ ಎಲ್ಲಿಗೆ ಬಂದಿದೆ; ಎರಡನೇ ಹಂತದ ಅಭಿವೃದ್ಧಿಯನ್ನು ಯಾವಾಗ ಆರಂಭಿಸಲಾಗುವುದು; ಎಷ್ಟು ಹೂಡಿಕೆ ಆಗಿದೆ ಭವಿಷ್ಯದ ನಿರೀಕ್ಷೆ ಏನು? | ಕ್ವಿನ್ ಸಿಟಿಯನ್ನು ಮೊದಲ ಹಂತದಲ್ಲಿ ಅಂತಿಮ ಅಧಿಸೂಚನೆಯಂತೆ ಒಟ್ಟು **3,490-15.04** ಎಕರೆ ಪ್ರದೇಶದಲ್ಲಿ ಅಭಿವೃದ್ಧಿಪಡಿಸಲು ಯೋಜಿಸಲಾಗಿದೆ. ಹಾಗೂ ಅಭಿವೃದ್ಧಿ ಕಾರ್ಯಗಳನ್ನು 5 ಹಂತಗಳಲ್ಲಿ ಕೈಗೆತ್ತಿಕೊಳ್ಳಲು ಟೆಂಡರ್ ಮುಂಖಾತರ ಗುತ್ತಿಗೆದಾರರನ್ನು ನೇಮಿಸಲಾಗಿದ್ದು ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು ಅಭಿವೃದ್ಧಿ ಕಾಮಗಾರಿಗಳ ಪೂರ್ವ ನಿರ್ಮಾಣ ಚಟುವಟಿಕೆಗಳು ಪ್ರಗತಿಯಲ್ಲಿದೆ.<br><br>ಎರಡನೇ ಹಂತದಲ್ಲಿ ಪ್ರಸ್ತಾಪಿತ ಯೋಜನೆಗೆ ಸ್ವಾಧೀನಪಡಿಸಲು ದಿನಾಂಕ:03.12.20225 ರಂದು ಜರುಗಿದ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ 397ನೇ ಸಭೆಯಲ್ಲಿ ನೆಲಮಂಗಲ ತಾಲ್ಲೂಕು, ತ್ಯಾಮಗೊಂಡ್ಲು ಹೋಬಳಿ, ಚಿಕ್ಕನಪಾಳ್ಯ, ಗೋರಘಟ್ಟ, ಮದಗ, ಕರಿಮಾರನಹಳ್ಳಿ ಗ್ರಾಮಗಳಲ್ಲಿ ಒಟ್ಟು 2000 ಎಕರೆ ಜಮೀನನ್ನು ಸ್ವಾಧೀನಪಡಿಸಲು ಮಂಡಳಿ ಸಭೆಯಲ್ಲಿ ನಿರ್ಣಯವಾಗಿದೆ. |

**ಸಂಖ್ಯೆ: ಸಿಐ 445 ಐಎಪಿ 2026**

**(ಎಂ.ಬಿ. ಪಾಟೀಲ)**

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು